ಶ್ರೀ ವೀರೇಂದ್ರ ಪಾಟೀಲ್.—ಅದನ್ನು ರೆಕ್ಕಚಾರ ಮಾಡಬೇಕಾಗುತ್ತದೆ.

ಶ್ರೀ ವಿ. ಎಸ್. ಶಿವಪ್ಪ.—ಈ 13 ಕೆರೆಗಳನ್ನೂ ಜೀರ್ಣೋದ್ಧಾರ ಮಾಡಬೇಕೆಂದು ಇರಾಖೆಯವರು ಬಹಳ ವರ್ಷಗಳ ಹಿಂದೆಯೇ ಅಂದಾಜನ್ನು ತಯಾರುಮಾಡಿ ಕಳುಹಿಸಿದ್ದಾರೆ. ಅಲ್ಲಿ ಕೆರೆಗಳು ಒಡೆದುಹೋಗಿ ಕೋಡಿಗಳು ಕಿತ್ತುಹೋಗಿವೆ. ಆ ಕೆರೆಗಳಲ್ಲಿ ದನಗಳು ಕುಡಿಯುವುದಕ್ಕೂ ನೀರು ನಿಲ್ಲುವುದಿಲ್ಲ. ಅವುಗಳನ್ನು ಜೀರ್ಣೋದ್ಧಾರ ಮಾಡದೆ ಆ ಕೆರೆಗಳು ನಾಶವಾಗಿವೆ. ನರ್ಕಾರ ದವರಿಗೆ ಹಣ ಒದಗಿದಾಗ ಆ ಕೆರೆಗಳ ರಿಪೇರಿಯನ್ನು ತೆಗೆದುಕೊಳ್ಳುತ್ತೇವೆ ಎಂದರೆ, ಎಷ್ಟು ವರ್ಷಗಳಲ್ಲಿ ತೆಗೆದುಕೊಳ್ಳುತ್ತಾರೆ ಎಂಬುದೇ ಗೊತ್ತಾಗುವುದಿಲ್ಲ. ಅಲ್ಲಿನ ಜನಗಳಿಗೆ ತುಂಬಾ ಅನ್ಯಾಯವಾಗುತ್ತದೆ. ಆದ್ದರಿಂದ ಆ ಕೆರೆಗಳ ರಿಪೇರಿ ಕೆಲಸವನ್ನು ತಕ್ಷಣ ಈ ವರ್ಷದಲ್ಲೇ ತೆಗೆದುಕೊಂಡು ಅವುಗಳನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಅವಕಾಶ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಅಲ್ಲಿ 24 ಕೆಲಸಗಳು ನಡೆಯುತ್ತಿವೆ. ಅದು ಸುಮಾರು 6,77,000 ರೂಪಾಯಿಗಳ ಅಂದಾಜಿನ ಕೆಲಸಗಳು ನಡೆಯುತ್ತಿವೆ. ಕೆಲಸಗಳು ಮುಗಿದಂತೆ ಪ್ರತಿವರ್ಷವೂ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ. ಈಗಾಗಲೇ ಆ ಕೆರೆಗಳ ಅಂದಾಜು ತಯಾರಾಗಿವೆ. ಎರ್ಲಾ ಕೆಲಸಗಳನ್ನೂ ತೆಗೆದುಕೊಳ್ಳುವುದಕ್ಕೆ ಅಷ್ಟೊಂದು ಹಣ ನಮ್ಮಲ್ಲಿ ಇಲ್ಲ. ಹಣಬಂದರೆ ಆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ಎಸ್. ಶಿವಪ್ಪ.—ನಾನು ಕೇಳಿರತಕ್ಕ ಅನೇಕ ಕೆರೆಗಳೇನಿವೆ ಅವು ಪೂರಾ ನಶಿಸಿ ಹೋಗತಕ್ಕ ಪರಿಸ್ಥಿತಿಯಲ್ಲಿವೆ. ಆದುದರಿಂದ ಅವುಗಳನ್ನು ಶೀಘ್ರವಾಗಿ ಜೀರ್ಣೋದ್ಧಾರ ಮಾಡಲು ಕಾರ್ಯಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ವಿಚಾರ ಮಾಡೋಣ.

Mr. DEPUTY SPEAKER.—Question No. 294 lapses as the member is not here.

Satyagraha for Upper Krishna Project

295. **Sri H. N. NANJE GOWDA** (Arkalgud).—

Will the Minister for Public Works be pleased to state :—

(*a*) whether an all party Satyagraha was launched for the 'Upper Krishna Irrigation Project' at Almatti in 1965;

(*b*) whether Government had then assured the completion of this Project as early as possible ; if so, the progress achieved so far;

(*c*) whether they have retrenched the employees working there in the first week of February 1968 ; if so, the number of employees so retrenched and the reasons for the same ?

A.—**Sri VEERENDRA PATIL** (Minister for Public Works).—

(*a*) Government is not aware of this.

(*b*) Does not arise.

(*c*) No.

ಶ್ರೀ ಎಚ್. ಎನ್. ನಂಜೇಗೌಡ.—ಇಲ್ಲಿ (ಅ) ಗೆ ಉತ್ತರವಾಗಿ ಸತ್ಯಾಗ್ರಹ ನಡೆಯುತ್ತಿರಲಿಲ್ಲ ಎಂದು ಹೇಳಿರಾಗಿದೆ. 1965 ರಲ್ಲಿ ಡಾ॥ ಕೆ. ಎಲ್. ರಾವ್ ಅವರು ಆಲಮಟ್ಟಿ ಮತ್ತು ನಾರಾಯಣಪುರಕ್ಕೆ ಬಂದಿದ್ದಾಗ ಅಲ್ಲಿ ಸತ್ಯಾಗ್ರಹ ನಡೆಯುತ್ತಿರಲಿಲ್ಲ ಎಂದು ತಾವು ಭಾವಿಸಿದ್ದೀರಾ ?

† ಶ್ರೀ ವೀರೇಂದ್ರ ಪಾಟೀಲ್.—ಡಾ॥ ಕೆ. ಎಲ್. ರಾವ್ ಅವರು ನಾರಾಯಣಪುರಕ್ಕೆ ಬಂದಿದ್ದುದು 1964 ರಲ್ಲಿ. ಆಗ ನಾರಾಯಣಪುರದಲ್ಲಿ ಕೆಲಸ ನಡೆಯುತ್ತಿತ್ತು. ಆಗ ಆಲಮಟ್ಟಿಯಲ್ಲಿ ಕೆಲವು ಜನರಲ್ಲಿ ಒಂದು ಕಮೋಷನ್ ಆಗಿತ್ತು ಎಂದು ಕೇಳಿದ್ದೆ. ಅದು ಆದನಂತರ ಯಾವ ಸತ್ಯಾಗ್ರಹ ಆದದ್ದೂ ನನಗೆ ತಿಳಿಯದು.

ಶ್ರೀ ಎಸ್. ಎಸ್. ಅರಕೇರಿ.—1964-65 ರಲ್ಲಿ ಆಲಮಟ್ಟಿಯಲ್ಲಿ ಆಲ್‌ಪಾರ್ಟೀಸ್ ಸತ್ಯಾಗ್ರಹ ನಡೆಯುತಿದ್ದು ಬಿಜಾಪುರದ ಮುನಿಸಿಪಾಲಿಟಿಯ ಪ್ರೇಸಿಡೆಂಟ್ನರೇ ಅಧಕ್ಕೆ ಅಧ್ಯಕ್ಷರಾಗಿದ್ದು ಅವರು ಆ ಚಳುವಳಿಯನ್ನು ಹೂಡಿ ಆಲಮಟ್ಟಿಗೂ ನೀರನ್ನು ಒದಗಿಸುವಂತೆ ಮಾಡಿದ್ದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಪ್ರಶ್ನೆಯಲ್ಲಿ 1965 ರಲ್ಲಿ ನಡೆದ ಸತ್ಯಾಗ್ರಹ ಎಂದು ಹೇಳಿದ್ದಾರೆ. ಕೆ. ಎಲ್. ರಾವ್ ಅವರು ಬಂದಿದ್ದುದು 1961 ರಲ್ಲಿ. ಅವರು ಬಂದಾಗ್ಗೆ ಅಲ್ಲಿ ಯಾವ ಚಳುವಳಿಯೂ ನಡೆಯಲಲ್ಲ. 1965 ರ ಚಳುವಳಿ ವಿಷಯು ಗೊತ್ತಿಲ್ಲ.

Sri H. SIDDAVEERAPPA.—It is true that some Overseers temporarily appointed have been retrenched from service?

Sri VEERENDRA PATIL.—They were not temporarily appointed. But the Superintending Engineer had appointed some people on work-charge basis that appointment was not in order, and so he was asked to terminate the services of those people.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಆಲಮಟ್ಟಿಯಲ್ಲಿ ಕಟ್ಟೆಯನ್ನು, ಕಟ್ಟಿದರೆ ಯಾವ ಯಾವ ಪ್ರದೇಶಕ್ಕೆ ಅನುಕೂಲವಾಗುತ್ತದೆ, ನಾರಾಯಣಪುರದಲ್ಲಿ ಕಟ್ಟೆಯನ್ನು ಕಟ್ಟಿದರೆ ಯಾವ ಯಾವ ಪ್ರದೇಶಕ್ಕೆ ಅನುಕೂಲವಾಗುತ್ತದೆ. ಈ ಎರಡರಲ್ಲಿ ಯಾವುದರಿಂದ ಹೆಚ್ಚಿನ ಅನುಕೂಲವಿದೆ?

ಶ್ರೀ ವೀರೇಂದ್ರ ಪಾಟೀಲ್.—ನಾವು ಕಟ್ಟೆಯನ್ನು ನಾರಾಯಣಪುರದಲ್ಲೇ ಕಟ್ಟಲ ಅಥವಾ ಆಲಮಟ್ಟಿಯಲ್ಲೇ ಕಟ್ಟಲ ಬಿಜಾಪುರ, ಗುಲ್ಬರ್ಗ ಮತ್ತು ರಾಯಚೂರು ಈ ಭಾಗಗಳಿಗೆ ನೀರನ್ನು ಸಾಗಿಸಬೇಕಾದರೆ ಎರಡು ಕಡೆಯಲ್ಲೂ ನೀರನ್ನು ರಿಜರ್ವ್ ಮಾಡಬೇಕಾಗುವುದು. ಆಲಮಟ್ಟಿಯಲ್ಲಿ ಕಟ್ಟಿದರೂ ನೀರು ನಾರಾಯಣಪುರಕ್ಕೆ ಬಂದೇ ಮುಂದಕ್ಕೆ ಹೋಗಬೇಕು.

ಶ್ರೀ ಎಸ್. ಎಂ. ಗುರೆಡ್ಡಿ.—ಕೆಲವರು ಆಲಮಟ್ಟಿಯಲ್ಲಿ ಮಾಡಿ ಎಂದು ಕೇಳುತ್ತಿದ್ದಾರೆ, ಇನ್ನು ಕೆಲವರು ಬಿಜಾಪುರಕ್ಕೆ ನೀರಿನ ಅನುಕೂಲವಾಗಬೇಕಾಗಿದ್ದರೆ ನಾರಾಯಣಪುರದಲ್ಲಿ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ವಿಜಾಪುರ ಜಿಲ್ಲೆಯಲ್ಲಿ ಇರಿಗೇಷನ್ನಿಗೆ ಮತ್ತು ಬಾಗೇವಾಡಿ—ಮುದ್ದೇಬಿಹಾಳ್ ತಾಲ್ಲೂಕುಗಳಲ್ಲಿ ಲಿಫ್ಟ್ ಇರಿಗೇಷನ್ನಿಗೆ ಅನುಕೂಲವಾಗಬೇಕಾಗಿದ್ದರೆ ತಮ್ಮ ಪ್ಲಾನನ್ನು ರಿವೈಜ್‌ಮಾಡಿ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈಗಿರತಕ್ಕ ರಿವೈಜ್ಡ್ ಎಸ್ಟಿಮೇಟ್ ಪ್ರಕಾರ ಮುದ್ದೇಬಿಹಾಳ್ ಮತ್ತು ಬಾಗೇವಾಡಿಗೆ ಅನುಕೂಲವಾಗಬಹುದು. ಈಗಿರತಕ್ಕ ಅಂದಾಜಿನ ಪ್ರಕಾರ 3 ಲಕ್ಷ 35 ಸಾವಿರ ಎಕರೆಗಳಿಗೆ ಅನುಕೂಲವಾಗುತ್ತದೆ ಎಂದು ತಿಳಿದುಬಂದಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದೀರಿ. ಅಂದರೆ ಏನೂ ಸಾಧನೆಯಾಗಿಲ್ಲವೆಂದು ತಿಳಿದುಕೊಳ್ಳಬೇಕೇ ಎಂಬ ಬಗ್ಗೆ ಸರಿಯಾದ ಕಾರಣವನ್ನು ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಸತ್ಯಾಗ್ರಹದ ಬಗ್ಗೆ ಪ್ರಶ್ನೆ ಕೇಳಿದ್ದು. ಅಲ್ಲಿ ಸತ್ಯಾಗ್ರಹ ನಡೆದಾಗ ಏನೂ ಕೆಲಸವಾಗಿರಲಿಲ್ಲ. ಈ ಯೋಜನೆಯನ್ನು ನಾರಾಯಣಪುರದಲ್ಲಿ ಪ್ರಾರಂಭ ಮಾಡುತ್ತಾರೋ ಅಥವಾ ಆಲಮಟ್ಟಿಯಲ್ಲಿ ಪ್ರಾರಂಭ ಮಾಡುತ್ತಾರೋ ಎನ್ನುವ ವಿಚಾರದಲ್ಲಿ ಜನರಿಗೆ ಭಿನ್ನಾಭಿಪ್ರಾಯ ಬಂದು ಸತ್ಯಾಗ್ರಹ ಮಾಡಿದರು. ಆ ಸಮಯದಲ್ಲಿ ಭರವಸೆ ಕೊಡುವುದು ಸರಿಯಲ್ಲವೆಂದು ತಿಳಿದು ಈ ರೀತಿ ಉತ್ತರ ಕೊಡಲಾಗಿದೆ.

ಶ್ರೀ ಶರಣಗೌಡ ಇನಾಂದಾರ್.—(ಇ) ಪ್ರಶ್ನೆಗೆ ಉತ್ತರವಾಗಿ ಯಾರನ್ನೂ ಕೆಲಸದಿಂದ ತೆಗೆದಿಲ್ಲವೆಂದು ಹೇಳಿದ್ದೀರಿ. ತಾತ್ಕಾಲಿಕವಾಗಿ ತೆಗೆದುಕೊಂಡಂತಹವರಲ್ಲಿ ಎಷ್ಟು ಜನರನ್ನು ಕೆಲಸದಿಂದ ತೆಗೆದಿದ್ದೀರಿ, ಆ ರೀತಿ ತೆಗೆದವರಲ್ಲಿ ಎಷ್ಟು ಜನ ಪದವೀಧರ ಇಂಜನಿಯರ್‌ಗಳು ಇದ್ದಾರೆ, ಎಷ್ಟು ಜನ ಡಿಪ್ಲೊಮಾ ಪಡೆದವರು ಇದ್ದಾರೆ?

ಶ್ರೀ ವೀರೇಂದ್ರ ಪಾಟೀರ್.—113 ಮಂದಿ ಸೂಪರ್‌ವೈಜರ್‌ಗಳನ್ನು ದಿನಗೂಲಿ ಮೇರೆ ಆ ಭಾಗದಲ್ಲಿ ಸರ್ವೆ ಮಾಡಿಸುವುದಕ್ಕೋಸ್ಕರ ತೆಗೆದುಕೊಂಡಿದ್ದರು. ಸರ್ಕಾರದ ಮುಂಜೂರಾತಿಯನ್ನು ಮೊದಲು ಪಡೆಯಬೇಕೆಂದು ನಾವು ತಿಳಿಸಿದಾಗ ಅವರನ್ನು ಕೆಲಸದಿಂದ ತೆಗೆದುಹಾಕಿದರು.

Mr. DEPUTY SPEAKER.—Question hour is over. Now Short Notice Question No. 27 by Sri J. P. Sarwesh.

Sri H. SIDDAVEERAPPA.—Sir, it is unfortunate that there are important questions in the list. I request the Chair to extend the question hour by fifteen minutes or in the alternative, these questions may by taken up tomorrow.

Mr. DEPUTY SPEAKER.—No. How is it possible ? Short notice question is to be taken up. I have called upon Sri J. P. Sarwesh to put it.

SHORT NOTICE QUESTION AND ANSWER

Setting fire to the Election Office at Kanagade Village in February 1968.

27. Sri J. P. SARWESH (Sedam).—

Sri B. B. SAYANAK (Belgaum).—

Will the Minister for Home and Municipal Administration be pleased to state :—

(*a*) whether the election office, Kanagada village, Sedam Taluk was set on fire at mid-night on 27th February 1968 while the candidates were inside the office ;

(*b*) the names of the candidates who were in election office when t was set on fire ;

(*c*) the names of persons killed and wounded in the fire ncident ;

(*d*) the reasons for deputing the S.I. of Sedam Police Station Sri Hanumanthareddy) to Kanagadda village against whom there were nany complaints of partiality ;

(*e*) whether the D.I.G., Gublarga visited the Kanagada village, f so, when ;

(*f*) whether D.I.G. and S.P. had received representation that a air and impartial investigator should be appointed to investigate the Kanagada murder case ; if so, from whom ;

(*g*) whether they are aware that political pressures has been rought upon officers to delete the names of actual Murderers ?